OS 21/2019

PW-1

ದಿನಾಂಕಃ **20.01.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನವನ್ನು ಭೋದಿಸಲಾಯಿತು.

**ಪಾಟೀ ಸವಾಲುಃ 1 ರಿಂದ 4, 9 ರಿಂದ 10, 12 ಮತ್ತು 16 ನೇ ಪ್ರತಿವಾದಿಗಳ ಪರ ಶ್ರೀ. ಎನ್ ಎನ್ ಆರ್ ವಕೀಲರಿಂದಃ**

ನಾರಾಯಣಪ್ಪ ನನ್ನ ತಾಯಿ ಎಂದರೆ ಸರಿ. ನಿಮ್ಮ ತಾಯಿಗೆ ಚಿಕ್ಕಹನುಮಂತಪ್ಪ ಏನಾಗಬೇಕು ಎಂದರೆ ಸಾಕ್ಷಿ ತಾತ ಎಂದು ಉತ್ತರಿಸುತ್ತಾರೆ. ಅಂದರೆ ನಿಮ್ಮ ತಾಯಿಯ ತಾತ ಗುಡ್ಡಂ ಪಾತಪ್ಪ ನವರ ತಮ್ಮ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಚಿಕ್ಕಹನುಮಂತಪ್ಪ ನವರಿಗೆ ಸೇರಿದ ಆಸ್ತಿಗಳಿಗಾಗಿಯೇ ನಾವು ಈ ಕೇಸ್ ಹಾಕಿರುವುದು ಎಂದರೆ ಸರಿ. ಸದರಿ ಚಿಕ್ಕಹನುಮಂತಪ್ಪ ಮತ್ತು ಹಾಗೂ ಅವರ ಮಗಳು ನರಸಮ್ಮಳಿಗೆ ವಾರಸುದಾರರು ಇಲ್ಲ ಹಾಗಾಗಿ ಅವರ ಆಸ್ತಿಗಳು ಅಂದರೆ ದಾವಾ ಆಸ್ತಿಗಳು ನಮಗೆ ಬರಬೇಕು ಎಂದು ನೀವು ಈ ದಾವೆ ಹಾಕಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಚಿಕ್ಕಹನುಮಂತಪ್ಪನವರಿಂದ ಅವರ ಮಗಳು ನರಸಮ್ಮಳಿಗೆ ದಾನಪತ್ರ ಆಗಿದೆ ಎಂದು ನೀವು ನಿಮ್ಮ ದಾವೆಯಲ್ಲಿ ಹೇಳಿದ್ದಿರಿ ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ನಿಮ್ಮ ವಾದಪತ್ರದಲ್ಲಿ ಕೆಲವು ಆಸ್ತಿಗಳು ಕೊಂಡುಕೊಂಡಿರುವ ಆಸ್ತಿಗಳು ಮತ್ತು ಕೆಲವು ಪಿತ್ರಾರ್ಜಿತವಾದ ಆಸ್ತಿಗಳು ಎಂದು ಹೇಳಿದ್ದಿರಿ ಎಂದರೆ ಸಾಕ್ಷಿ ಇಲ್ಲ, ಪಿತ್ರಾರ್ಜಿತ ಆಸ್ತಿಗಳು ಎಂದು ಹೇಳಿದ್ದೇವೆ ಎಂದು ಉತ್ತರಿಸುತ್ತಾರೆ. ಚಿಕ್ಕಹನುಮಂತಪ್ಪನವರಿಂದ ನರಸಮ್ಮನವರಿಗೆ ದಾನಪತ್ರ ಆಗಿರುವ ಬಗ್ಗೆ ದಾಖಲಾತಿಯನ್ನು ಹಾಜರುಪಡಿಸಿದ್ದೇನೆ. ನೀವು ಹಾಜರುಪಡಿಸಿರುವ ದಾಖಲಾತಿಗಳಲ್ಲಿ ದಾನಪತ್ರ ಇರುವುದಿಲ್ಲ ನೀವು ಸುಳ್ಳು ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ಹಾಜರುಪಡಿಸಿದ್ದೇನೆ ಮಿಸ್ ಆಗಿರಬಹುದು ಎಂದು ಉತ್ತರಿಸುತ್ತಾರೆ. ದಾನಪತ್ರ ಆದ ನಂತರ ನರಸಮ್ಮನವರು ಕೆಲವು ಆಸ್ತಿಗಳನ್ನು ಮಾರಾಟ ಮಾಡಿದ್ದಾರೆ ಎಂದು ಹೇಳಿದ್ದಿರಿ ಆ ಆಸ್ತಿಗಳು ಯಾವುವು ಎಂದು ಹೇಳಬಹುದಾ ಎಂದರೆ ಸಾಕ್ಷಿ ಹೇಳಲು ಆಗುವುದಿಲ್ಲ ಎಂದು ಉತ್ತರಿಸುತ್ತಾರೆ.

ನಿಮ್ಮ ಪ್ರಮಾಣಪತ್ರದ ಖಂಡಿಕೆ 6 ರಲ್ಲಿ ಚಿಕ್ಕಹನುಮಂತಪ್ಪನವರಿಗೆ ದಾವಾ ಸ್ವತ್ತುಗಳಲ್ಲಿ ಕೆಲವು ಪಿತ್ರಾರ್ಜಿತ ಮತ್ತು ಕೆಲವು ಸ್ವಯಾರ್ಜಿತ ಆಸ್ತಿಗಳು ಎಂದು ಹೇಳಿದ್ದಿರಿ ಎಂದರೆ ಸಾಕ್ಷಿ ಪಿತ್ರಾರ್ಜಿತ ಆಸ್ತಿ ಎಂದಷ್ಟೇ ಹೇಳಿದ್ದೇನೆ ಎಂದು ಉತ್ತರಿಸುತ್ತಾರೆ. ನಿಮ್ಮ ಪ್ರಮಾಣಪತ್ರದಲ್ಲಿ ಬರೆದಿರುವ ವಿಚಾರಗಳು ಗೊತ್ತಿವೆಯಾ ಎಂದರೆ ಸಾಕ್ಷಿ ಕೆಲವು ಗೊತ್ತಿವೆ, ಕೆಲವು ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಚಿಕ್ಕಹನುಮಂತಪ್ಪ ಅವರ ಮಗಳಾದ ನರಸಮ್ಮನವರ ವಿರುದ್ಧ ದಾನಪತ್ರ ರದ್ದುಪಡಿಸಲು ಕೋರಿ ಮಧುಗಿರಿಯ ಸಿವಿಲ್ ನ್ಯಾಯಾಲಯದಲ್ಲಿ ಒ ಎಸ್ 153/1954 ರಂತೆ ದಾವೆ ಹೂಡಿದ್ದರು ಎಂದರೆ ಸಾಕ್ಷಿ ಹೌದು ಎಂದು ಉತ್ತರಿಸುತ್ತಾರೆ. ಅದೇ ದಾವೆಯಲ್ಲಿ ನರಸಮ್ಮನವರು ಅಶ್ವಥನಾರಾಯಣರೆಡ್ಡಿ ಮತ್ತು ಚಿಕ್ಕಅಶ್ವಥನಾರಾಯಣ ರೆಡ್ಡಿ ರವರಿಗೆ ಮಾಡಿಕೊಟ್ಟಿರುವ ಕ್ರಯಪತ್ರವನ್ನು ರದ್ದುಪಡಿಸುವಂತೆ ಕೋರಿದ್ದರು ಎಂದರೆ ಸಾಕ್ಷಿ ಇಲ್ಲ ಎಂದು ಉತ್ತರಿಸುತ್ತಾರೆ. ಆ ದಾವೆಯಲ್ಲಿ ದಾನಪತ್ರ ರದ್ದುಪಡಿಸುವಂತೆ ಕೋರಿದ್ದ ಬಾಬ್ತು ದಾವೆ ಡಿಕ್ರಿ ಆಗಿದ್ದು, ನರಸಮ್ಮನವರು ಅಶ್ವಥನಾರಾಯಣರೆಡ್ಡಿ ಮತ್ತು ಚಿಕ್ಕಅಶ್ವಥನಾರಾಯಣ ರೆಡ್ಡಿ ರವರಿಗೆ ಮಾಡಿಕೊಟ್ಟಿರುವ ಕ್ರಯಪತ್ರವನ್ನು ರದ್ದುಪಡಿಸುವಂತೆ ಕೋರಿದ್ದ ಪರಿಹಾರದ ಬಾಬ್ತು ದಾವೆ ವಜಾ ಆಗಿತ್ತು ಎಂದರೆ ಸಾಕ್ಷಿ ದಾನಪತ್ರ ರದ್ದಾಗಿಲ್ಲ ಎಂದು ಉತ್ತರಿಸುತ್ತಾರೆ. ನೀವು ಒ ಎಸ್ 153/1954 ದಾವೆಯಲ್ಲಿನ ತೀರ್ಪು ಮತ್ತು ದಾಖಲಾತಿಗಳನ್ನು ತೆಗೆಸಿ ನೋಡಿದ್ದೀರಾ ಎಂದರೆ ಸಾಕ್ಷಿ ದಾಖಲಾತಿಗಳು ಸಿಕ್ಕಿಲ್ಲ ಎಂದು ಉತ್ತರಿಸುತ್ತಾರೆ. ದಾನಪತ್ರ ರದ್ದಾಗಿಲ್ಲ ಎಂದು ಯಾವ ದಾಖಲಾತಿ ನೋಡಿ ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ವಿರುದ್ಧ ಪಕ್ಷಗಾರರು ನ್ಯಾಯಾಲಯದಲ್ಲಿ ಹಾಜರುಪಡಿರುವ ಡಿಕ್ರಿ ಕಾಪಿಯನ್ನು ನೋಡಿ ಎಂದು ಉತ್ತರಿಸುತ್ತಾರೆ. ಪುನಃ ಹೇಳುತ್ತಾರೆ ಅವರು ಹಾಕಿರುವ ತಕರಾರಿನಲ್ಲಿ ಹೇಳಿರುವದನ್ನು ನೋಡಿ ದಾಖಲಾತಿಗಳನ್ನು ಹುಡುಕಿದೆವು ಸಿಗಲಿಲ್ಲ ಎಂದು. ನಿಮಗೆ ಗೊತ್ತಾದ ನಂತರ ತುಮಕೂರು ಜಿಲ್ಲಾ ನ್ಯಾಯಾಲಯದಲ್ಲಿ ಅರ್ಜಿಯನ್ನು ಸಲ್ಲಿಸಿ ಆ ದಾವೆಯ ಡಿಕ್ರಿ ಕಾಪಿಯನ್ನು ಪಡೆದುಕೊಳ್ಳಲು ನಿಮಗೇನು ತೊಂದರೆ ಇರಲಿಲ್ಲ ಎಂದರೆ ಸಾಕ್ಷಿ ಇರಲಿಲ್ಲ ಎಂದು ಉತ್ತರಿಸುತ್ತಾರೆ. ದಾನಪತ್ರ ರದ್ದಾಗಿಲ್ಲ ಎಂದು ಯಾವ ದಾಖಲಾತಿಯ ಆಧಾರದ

ಮೇಲೆ ಹೇಳುತ್ತಿದ್ದಿರಿ ಎಂದರೆ ಸಾಕ್ಷಿ ನಾವು ದಾಖಲಾತಿಗಳನ್ನು ಹುಡುಕಿದ್ದೇವೆ ಸಿಕ್ಕಿರುವುದಿಲ್ಲ ಹಾಗಾಗಿ ಹೇಳುತ್ತಿದ್ದೇನೆ ಎಂದು ಉತ್ತರಿಸುತ್ತಾರೆ. ಕ್ರಯಪತ್ರ ರದ್ದಾದ ನಂತರ ಚಿಕ್ಕಹನುಮಂತಪ್ಪನವರು (ನರಸಮ್ಮನವರ ತಂದೆ) ದಿಃ 21.05.1956 ರಂದು ಸರ್ವೆ ನಂಃ 332 ರಲ್ಲಿ ಅಂದರೆ ಐಟಂ 4, 5,7 ಮತ್ತು 8 ರಲ್ಲಿ ವೆಂಕಟೇಶ್, ಬುಗ್ಗಪ್ಪ, ಚೆನ್ನಪ್ಪ ಮತ್ತು ನಾರಾಯಣಪ್ಪನವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅದೇ ರೀತಿ ಸರ್ವೆ ನಂಃ 411 ಅಂದರೆ ಐಟಂ ನಂಃ3 ನೇ ಸ್ವತ್ತನ್ನು ಪುಲ್ಲಣ್ಣ ಬಿನ್ ಮುತಲಾರಿ ವೆಂಕಣ್ಣ ನವರಿಗೆ ದಿಃ 16.02.1957 ರಲ್ಲಿ ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ  ಸುಳ್ಳು ಎಂದು ಉತ್ತರಿಸುತ್ತಾರೆ. ತದನಂತರ ಪುಲ್ಲಣ್ಣನವರು ಸರ್ವೆ ನಂಃ 411 ನ್ನು ರಾಮಯ್ಯ, ನಾರಾಯಣಪ್ಪ, ವೆಂಕಟೇಶ್ ಮತ್ತು ಬುಗ್ಗಪ್ಪರವರಿಗೆ ದಿಃ 29.09.1958 ರಂದು ನೋಂದಾಯಿತ ಕ್ರಯಪತ್ರದ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ  ಸುಳ್ಳು, ಅವುಗಳನ್ನು ಅವರು ಸೃಷ್ಟಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಅದೇ ರೀತಿ ನಿಮ್ಮ ತಾಯಿಯ ತಂದೆ ಲಿಂಗಪ್ಪ ಅವರ ಭಾಗದ ಸರ್ವೆ ನಂಃ 411/1 ರ ಜಮೀನನ್ನು ದಿಃ 06.12.1957 ರಂದು ಮುತ್ಯಾಲಯ್ಯ ಬಿನ್ ನಾಗಪ್ಪರವರಿಗೆ ನೋಂದಾಯಿತ ಕ್ರಯಪತ್ರ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ  ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಾತ ಲಿಂಗಪ್ಪನವರಿಗೆ ಮುತ್ಯಾಲಯ್ಯನವರಿಗೆ ಮಾರಾಟ ಮಾಡಿದ್ದ ಮೇಲೆ ಹೇಳಿದ್ದ ಜಮೀನನ್ನು ಸದರಿ ಮುತ್ಯಾಲಯ್ಯನವರು ದಿಃ 29.09.1958 ರಂದು ರಾಮಯ್ಯ, ನಾರಾಯಣಪ್ಪ, ವೆಂಕಟೇಶ್ ಮತ್ತು ಬುಗ್ಗಪ್ಪರವರಿಗೆ ನೋಂದಾಯಿತ ಕ್ರಯಪತ್ರ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ  ಸುಳ್ಳು ಎಂದು ಉತ್ತರಿಸುತ್ತಾರೆ. ನಿಮ್ಮ ತಾತನ ಭಾಗದ ಸರ್ವೆ ನಂಃ 331 ನ್ನು ಅಕ್ಕಲಪ್ಪನವರಿಗೆ ದಿಃ 29.04.1965 ರಂದು ನೋಂದಾಯಿತ ಕ್ರಯಪತ್ರ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲಎಂದು ಉತ್ತರಿಸುತ್ತಾರೆ. ನೀವು ಹಾಜರುಪಡಿರುವ ಸರ್ವೆ ನಂಃ 331 ರ ಹಳೆಯ ಮತ್ತು ಹೊಸ ಪಹಣಿಗಳಲ್ಲಿ ಅಕ್ಕಲಪ್ಪನವರ ಹೆಸರು ನಮೂದು ಇದೆಯಾ ಇಲ್ಲವಾ ಎಂದರೆ ಸಾಕ್ಷಿ

ಮರೆತಿದ್ದೇನೆ ಎಂದು ಉತ್ತರಿಸುತ್ತಾರೆ. ನಾನು ಹಾಜರುಪಡಿರುವ ಪಹಣಿಗಳನ್ನು ಪಡೆದುಕೊಂಡ ನಂತರ ಅವುಗಳನ್ನು ಪರಿಶೀಲಿಸಿ ಹಾಜರುಪಡಿಸಿದ್ದೇನೆ ಎಂದರೆ ಸರಿ. ನಿಮ್ಮ ತಾತ ಸರ್ವೆ ನಂಃ 331 ರಲ್ಲಿ ಸ್ವಲ್ಪ ಭಾಗವನ್ನು ವೆಂಕಟೇಶ್, ಬುಗ್ಗಪ್ಪ, ಚೆನ್ನಪ್ಪ ಮತ್ತು ನಾರಾಯಣಪ್ಪರವರಿಗೆ ದಿಃ 21.05.1956 ರಲ್ಲಿ ನೋಂದಾಯಿತ ಕ್ರಯಪತ್ರ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನರಸಮ್ಮನವರು ದಾನಪತ್ರ ರದ್ದಾಗುವ ಮೊದಲೇ ಸರ್ವೆ ನಂಃ 331 ರಲ್ಲಿ ಸ್ವಲ್ಪ ಜಮೀನನ್ನುದಿಃ 09.03.1951 ರಂದು ಚಿಕ್ಕಅಶ್ವಥನಾರಾಯಣ ರೆಡ್ಡಿ ರವರಿಗೆ ನೋಂದಾಯಿತ ಕ್ರಯಪತ್ರ ಮೂಲಕ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಂತರ ಮೇಲೆ ಹೇಳಿದ ಸರ್ವೆ ನಂಬರ್ ಜಮೀನನ್ನು ಚಿಕ್ಕಅಶ್ವಥನಾರಾಯಣರೆಡ್ಡಿ ರಮರ ದಿಃ 08.05.1956 ರಂದು ವೆಂಕಟರವಣಪ್ಪ, ಚೆನ್ನಪ್ಪ, ಬುಗ್ಗಪ್ಪ ಮತ್ತು ನಾರಾಯಣಪ್ಪ ರವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಅದು ಸುಳ್ಳು ಎಂದು ಉತ್ತರಿಸುತ್ತಾರೆ. ಈ ಮೇಲೆ ಹೇಳಿದಂತೆ ಕ್ರಯಪತ್ರಗಳ ಪ್ರಕಾರ ಈಗಾಗಲೇ ನಿಮ್ಮ ತಾಯಿಯ ತಾತ ಗುಡ್ಡಂ ಪಾತಪ್ಪ ಹಾಗೂ ಚಿಕ್ಕಹನುಮಂತಪ್ಪನವರು ಜಮೀನುಗಳನ್ನು ಮಾರಾಟ ಮಾಡಿರುವುದರಿಂದ ನಿಮಗೆ ಯಾವುದೇ ಜಮೀನುಗಳು ಉಳಿದಿಲ್ಲ ಎಂದರೆ ಸಾಕ್ಷಿ ಅದೆಲ್ಲ ಸುಳ್ಳು, ಆ ರೀತಿ ಪತ್ರಗಳನ್ನು ಸೃಷ್ಟಿ ಮಾಡಿದ್ದಾರೆ ಎಂದು ಉತ್ತರಿಸುತ್ತಾರೆ. ಸದರಿ ಕ್ರಯಪತ್ರಗಳ ಪ್ರಕಾರ ಸ್ವಾಧೀನವನ್ನು ಖರೀದಿದಾರರಿಗೆ ಬಿಟ್ಟುಕೊಟ್ಟಿದ್ದಾರೆ ಹಾಗಾಗಿ ಸದರಿ ಜಮೀನುಗಳು ನಿಮ್ಮ ತಾಯಿಯ ಸ್ವಾಧೀನದಲ್ಲಾಗಲೀ, ಅವರ ತಾತನ ಸ್ವಾಧೀನದಲ್ಲಾಗಲೀ, ಚಿಕ್ಕಹನುಮಂತಪ್ಪನವರ ಸ್ವಾಧೀನದಲ್ಲಾಗಲೀ ಮತ್ತು ನಿಮ್ಮ ಸ್ವಾಧೀನದಲ್ಲಾಗಲೀ ಇಲ್ಲ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅಕ್ಕಲಪ್ಪನವರು ದಿಃ 29.04.1965 ರಲ್ಲಿ ಸರ್ವೆ ನಂಃ 331 ರಲ್ಲಿ ಖರೀದಿಸಿರುವ ಸ್ವತ್ತಿನಲ್ಲಿ ಅಕ್ಕಲಪ್ಪನವರೇ ಸ್ವಾಧೀನದಲ್ಲಿದ್ದರು, ತದನಂತರ ಅವರ ಮಕ್ಕಳು ಸ್ವಾಧೀನದಲ್ಲಿ ಇದ್ದಾರೆ ಎಂದರೆ ಸಾಕ್ಷಿ ಸುಳ್ಳು

ಎಂದು ಉತ್ತರಿಸುತ್ತಾರೆ. ಅದೇ ರೀತಿ ಸರ್ವೆ ನಂಃ 331,332, 411 ರಲ್ಲಿ ಚೆನ್ನಪ್ಪನವರು ಖರೀದಿಸಿದ ಬಾಬ್ತು ಅವರ ಭಾಗಕ್ಕೆ ಬಂದಿರುವ ಜಮೀನುಗಳಲ್ಲಿ ಅವರ ನಂತರ ಅವರ ಮಕ್ಕಳಾದ ರಾಮಣ್ಣ ಮತ್ತು ಸುಬ್ಬಣ್ಣ ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ ಎಂದು ಉತ್ತರಿಸುತ್ತಾರೆ. ಪುನಃ ಹೇಳುತ್ತಾರೆ ಸುಳ್ಳು ಎಂದು. ರಾಮಣ್ಣನವರು ತೀರಿಕೊಂಡ ನಂತರ ಅವರ ಮಕ್ಕಳಾದಾ ನಾರಾಯಣಪ್ಪ, ಪ್ರತಿವಾದಿ 9 ಮತ್ತು 10 ರವರು ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸುಬ್ಬಣ್ಣನ ನಂತರ ಅವರ ಮಗ ನಾಗಭೂಷಣ ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಾಗಭೂಷಣ ನಂತರ ಈಗ ಅವರ ವಾರಸುದಾರರು ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಸದರಿ ಕ್ರಯಪತ್ರಗಳ ಆಧಾರದ ಮೇಲೆ ರೆವಿನ್ಯೂ ದಾಖಲಾತಿಗಳು ಅವರವರ ಹೆಸರಿಗೆ ಆಗಿದ್ದು ಪ್ರಸ್ತುತ ಸುಬ್ಬಣ್ಣ ಮತ್ತು ರಾಮಣ್ಣನವರ ಹೆಸರುಗಳಲ್ಲಿ ರೆವಿನ್ಯೂ ದಾಖಲಾತಿಗಳು ಬದಲಾವಣೆಯಾಗಿ ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಅದೇ ರೀತಿ ವೆಂಕಟಪ್ಪನವರು ಖರೀದಿಸಿದ್ದ ಜಮೀನನ್ನು ದಿಃ 16.04.1964 ರಲ್ಲಿ ಪರ್ವತಯ್ಯ ಎನ್ನುವವರಿಗೆ ಮಾರಾಟ ಮಾಡಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಪರ್ವತಯ್ಯ ಈಗ ತೀರಿಕೊಂಡಿದ್ದು ಅವರು ಖರೀದಿಸಿದ್ದ ಆಸ್ತಿ ಈಗ ಅವರ ಮಕ್ಕಳಾದ ಪೆದ್ದಮಲ್ಲೇಶಪ್ಪ, ರಾಮಣ್ಣ, ಚಿಕ್ಕಮಲ್ಲಪ್ಪ ರವರ ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ತದನಂತರ ದೊಡ್ಡಮಲ್ಲಪ್ಪ ತೀರಿಕೊಂಡ ನಂತರ ಅವರ ಮಕ್ಕಳು ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಬುಗ್ಗಪ್ಪ ಖರೀದಿಸಿದ ಆಸ್ತಿಗಳಲ್ಲಿ ಬುಗ್ಗಪ್ಪ ಮತ್ತು ಅವರ ಅಣ್ಣತಮ್ಮಂದಿರು ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ನಾರಾಯಣಪ್ಪ ಖರೀದಿಸಿದ ಆಸ್ತಿಗಳಲ್ಲಿ ಸುಬ್ಬರಾಯಪ್ಪ, ತಿಪ್ಪಣ್ಣ, ನಾಗಭೂಷಣ ಮತ್ತು ಸುಬ್ಬಣ್ಣ ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ. ಮೇಲೆ ಹೇಳಿದವರಲ್ಲಿ ತಿಪ್ಪಣ್ಣ ಇತ್ತೀಚೆಗೆ ತೀರಿಕೊಂಡಿದ್ದು ಅವರು ಮಕ್ಕಳು ಅವರ ಭಾಗದ ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ನಾರಾಯಣಪ್ಪ ತೀರಿಕೊಂಡ ನಂತರ ಅವರ ಮಗ ಸುಬ್ಬಣ್ಣ ಇವರ ತದನಂತರ ಇವರ ಮಗ ವೆಂಕಟೇಶ್ ಈಗ ಸ್ವಾಧೀನಲ್ಲಿದ್ದಾರೆ ಎಂದರೆ ಸಾಕ್ಷಿ ಸುಳ್ಳು ಎಂದು ಉತ್ತರಿಸುತ್ತಾರೆ.

ವಿನಂತಿಯ ಮೆರೆಗೆ ಮುಂದುವರೆದ ಪಾಟೀ ಸವಾಲು ಮುಂದೂಡಲಾಯಿತು.

**(ನನ್ನ ಉಕ್ತಲೇಖನ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ.ಹೇ.ಕೇ.ಸರಿ ಇದೆ.

ಹಿರಿಯ ಸಿವಿಲ್ ಜಡ್ಜ್ ಮತ್ತು ಜೆಎಂಎಫ್.ಸಿ.
ಪಾವಗಡ.